
ಇಬ್ಬರಿಗೂ ಈ ವಿಷಯ ತಿಳಿದಿದ್ದು!

ಆ ಕ್ಯಾಂಪಿನಲ್ಲಿ ಕಳೆದ ಮೂರು ತಿಂಗಳಲ್ಲಿ ಮನುಷ್ಯತ್ವ ಎನ್ನುವುದು ಎಲ್ಲವನ್ನೂ ಮೀರಿದ್ದು ಎಂದರಿವಾಯಿತು. ಎಷ್ಟೋ ಮಂದಿ ಗೆಳೆಯರಾದರು. ದಿನವೂ ಬೆಂಗಾವಲು ಪಡೆಗಳೊಂದಿಗೆ ಹಡಗಿನಲ್ಲಿ ತುಂಬಿ ತಂಡ ತಂಡವಾಗಿ ಜನರನ್ನು ಬೇರೆ ಬೇರೆ ಪ್ರದೇಶಗಳಲ್ಲಿದ್ದ ನಿರಾಶ್ರಿತರ ಶಿಬಿರಗಳಿಗೆ ಹೊತ್ತೊಯ್ಯುತ್ತಿದ್ದರು. ಏನೂ ಮಾಡಲಾಗದೆ ನಾನು ಇವೆಲ್ಲಕ್ಕೂ ಮೂಕಸಾಕ್ಷಿಯಾಗಿದ್ದೆ.

ನಾನು ಅರ್ಜೆಂಟೈನಾದವನಾದ್ದರಿಂದ ಕ್ಯಾಂಪಿನೊಳಗೆ ಕೆಲಸ ಮಾಡಲು ಅನುಮತಿ ಸಿಕ್ಕಿತ್ತು. ಅಲ್ಲಿ ಪೈಂಟರ್ ಆಗಿ ಕೆಲಸ ಮಾಡುತ್ತಿದ್ದೆ. ಖಾಲಿಯಾದ ಕೋಣೆಗಳಿಗೆ ಬಣ್ಣ ಹೊಡೆಯುವ ಕೆಲಸ. ಆ ಕೋಣೆಗಳ ಗೋಡೆಗಳ ತುಂಬ ಯಾರ್‍ಯಾರದೋ ಹೆಸರುಗಳು, ದಿನಾಂಕಗಳು, ಸಂದೇಶಗಳು. ಅವೆಲ್ಲ ಅವುಗಳನ್ನು ಬರೆದವರ ಬದುಕಿನ ಕೊನೆಯ ಕುರುಹುಗಳಂತೆ ನನಗೆ ಕಂಡವು. ಬಣ್ಣ ಹಚ್ಚಿದ ಮೇಲೆ ಚಿಕ್ಕ ಕಬ್ಬಿಣ ತುಂಡಿನಿಂದ ಗೋಡೆಯ ಮೇಲಿದ್ದ ಎಲ್ಲವನ್ನೂ ಪುನಃ ಹಾಗೆಯೇ ಕೆತ್ತುತ್ತಿದ್ದೆ. ಒಮ್ಮೆ ಹೀಗೆ ಮಾಡುವಾಗ ಸಿಕ್ಕಿಬಿದ್ದು ನನ್ನನ್ನು ಆ ಕೆಲಸದಿಂದ ತೆಗೆದು ಬಟ್ಟೆ ಒಗೆಯುವ ಕೆಲಸಕ್ಕೆ ಹಾಕಿದರು.

ಮೂರು ತಿಂಗಳ ನಂತರ ಕ್ಯಾಂಪಿನಿಂದ ನಮ್ಮ ಬಿಡುಗಡೆಯಾಯಿತು. ಸ್ನೇಹಿತರ ಸಾವಿನ ನೋವನ್ನು ಮನಸ್ಸಿನಲ್ಲಿ ಹೊತ್ತು ಏನಾದರೂ ಮಾಡಲೇಬೇಕೆಂದು ಅಲ್ಲಿಂದ ಹೊರಬಿದ್ದೆ. ಪ್ಯಾರಿಸ್‌ಗೆ ಬಂದು ತಲುಪಿದೆವು. ಆದರೂ ಅದೊಂದು ರೀತಿಯಲ್ಲಿ ಜೈಲಿನ ಆವರಣದಲ್ಲಿ ಸ್ವತಂತ್ರವಾಗಿ ಓಡಾಡಬಹುದು ಎನ್ನುವ ಸ್ಥಿತಿ. ನಮ್ಮ ದಾಖಲೆಗಳಲ್ಲಿದ್ದ ಯಹೂದಿ ಎನ್ನುವ ಮೊಹರು ಬದುಕನ್ನು ನಿಯಂತ್ರಿಸುತ್ತಿತ್ತು. ಸ್ವತಂತ್ರವಾಗಿ ಓಡಾಡುವಂತಿರಲಿಲ್ಲ. 'ಯಹೂದಿಗಳಿಗೆ ಕೆಲಸವಿಲ್ಲ' ಎನ್ನುವ ಫಲಕಗಳು ಕಣ್ಣಿಗೆ ರಾಚುತ್ತಿದ್ದವು. ಯಹೂದಿಗಳನ್ನು ಕ್ರೂರ ರಾಕ್ಷಸರಂತೆ



ಅಡೆಲ್ಫೊ ಕಮಿನ್ಸ್ಕಿ